ಶ್ರೀ ಬಿ. ರಾಚಯ್ಯ.—ಗುಲ್ಬರ್ಗ ವಿಶ್ವವಿದ್ಯಾನಿಲಯದಿಂದ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಪತ್ರ ಬಂದಿದೆ. ಆ ಬಗ್ಗೆ ವಿವರಗಳು ಈಗ ನನ್ನ ಹತ್ತಿರ ಇಲ್ಲ.

ಶ್ರೀ ಬಾಪೂಗೌಡ ದರ್ಶನಾಪುರ.—ಈ ಕಾಲೇಜು ಸ್ಥಾಪಿಸಬೇಕೆಂದಿರುವ ಸ್ಥಳ ಕೃಷ್ಣಾ ಮೇಲ್ದಂಡೆ ಯೋಜನೆಯ ಕೇಂದ್ರ ಪ್ರದೇಶದಲ್ಲಿದೆ. ಇಬ್ಬರು ಮುಖ್ಯ ಇಂಜಿನಿಯರುಗಳು ಸೇರಿದಂತೆ ಸುಮಾರು ಆರೇಳು ನೂರು ಜನ ಸಿಬ್ಬಂದಿ ವರ್ಗದವರು ಅಲ್ಲಿ ಕೆಲಸ ಮಾಡುತ್ತಿದ್ದಾರೆ, ಷಹಾಪುರದಲ್ಲಿ ಡಿಗ್ರಿ ಕಾಲೇಜು ಇಲ್ಲ. ಈ ಬಗ್ಗೆ ಈಗಾಗಲೇ ವಿಶ್ವವಿದ್ಯಾನಿಲಯದವರು ಶಿಫಾರಸ್ಸು ಮಾಡಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಇದನ್ನು ಕಾರ್ಯಗತ ಮಾಡುವ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅಲ್ಲಿ ಪ್ರಥಮ ದರ್ಜೆ ಕಾಲೇಜನ್ನು ತೆರೆಯಬೇಕೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ವಿಶ್ವವಿದ್ಯಾನಿಲಯದವರು ಅದಕ್ಕೆ ಅಫಿಲಿಯೇಷನ್ ಕೊಡುವ ಬಗ್ಗೆ ಒಪ್ಪಿಗೆ ಬಂದಿಲ್ಲವಾದ ಕಾರಣ ತಡವಾಗಿದೆ. ಅದು ಬಂದ ತಕ್ಷಣ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಸವರಾಜ ಪಾಟೀಲ ಅನ್ವಾರಿ.—ಅಧ್ಯಕ್ಷರೇ, ನಾನು ತಮ್ಮ ಮೂಲಕ ಮಾನ್ಯ ವಿದ್ಯಾ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಮೂಲಕ ಇನ್ನೂ ಇತರ ಯಾವ ಯಾವ ತಾಲೂಕುಗಳಲ್ಲಿ ಅಥವಾ ಸ್ಥಳಗಳಲ್ಲಿ ಡಿಗ್ರಿ ಕಾಲೇಜನ್ನು ಪ್ರಾರಂಭ ಮಾಡುವ ಉದ್ದೇಶವುಳ್ಳವರಾಗಿದ್ದೀರಿ, ಮತ್ತು ಶಿಫಾರಸ್ಸು ಸಮಿತಿಯವರು ಲಿಂಗಸುಗೂರಿನಲ್ಲಿ ಡಿಗ್ರಿ ಕಾಲೇಜನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ರಾಚಯ್ಯ.—ಲಿಂಗಸುಗೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ತೆರೆಯಬೇಕೆಂದು ವಿಶ್ವ ವಿದ್ಯಾಲಯದವರಿಂದ ಯಾವುದೇ ಸೂಚನೆಯಾಗಲೀ, ವರದಿಯಾಗಲೀ ಬಂದಿಲ್ಲ.

ಶ್ರೀ ಬಾಪೂಗೌಡ ದರ್ಶನಾಪುರ.—ಸ್ವಾಮಿ, ಗುಲ್ಬರ್ಗ ವಿಶ್ವವಿದ್ಯಾಲಯದವರು ಷಹಾಪುರದಲ್ಲಾ ಕಾಲೇಜು ತೆರೆಯುವುದರ ಬಗ್ಗೆ ಶಿಫಾರಸ್ಸು ಮಾಡಿ ಕಳಿಸಿದ್ದಾರೆ. ಈ ಶೈಕ್ಷಣಿಕ ವರ್ಷದ ಅವಧಿಯಲ್ಲಾದರೂ ಅದಕ್ಕೆ ಮಂಜೂರಾತಿ ಕೊಡುತ್ತೀರಾ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ವಿಶ್ವವಿದ್ಯಾನಿಲಯದವರು ಅಫಿಲಿಯೇಶನ್ ಕೊಟ್ಟ ತಕ್ಷಣ ಮುಂದಿನ ಯೋಚನೆ ಮಾಡುತ್ತೇವೆ.

ಸಂಕೇಶ್ವರ ಮತ್ತು ಹುಕ್ಕೇರಿ ಮತ್ತು ಇತರ 11 ಗ್ರಾಮಗಳ ನೀರು ಸರಬರಾಜು ಯೋಜನೆ.

೫೩. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ನಗರಾಭಿವೃದ್ಧಿ ಮತ್ತು ಆಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಸಂಕೇಶ್ವರ ಹುಕ್ಕೇರಿ ಹಾಗೂ 11 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿ ದೊರೆತ ದಿನಾಂಕ ಯಾವುದು ?

ಆ) ಇದಕ್ಕೆ ಪ್ಲಾನು ಮತ್ತು ಎಸ್ಟಿಮೇಟು ತಯಾರಿಸಲಾಗಿದೆಯೇ ? ಇದಕ್ಕೆ ತಗಲುವ ಹಣದ ಮೊತ್ತ ಎಷ್ಟು ?

ಇ) ಕರ್ನಾಟಕ ಸರ್ಕಾರದಿಂದ ಈ ಯೋಜನೆಗೆ ಹಣದ ವ್ಯವಸ್ಥೆ ಮಾಡಿ ಕೆಲಸ ಪ್ರಾರಂಭಿಸಂವ ಬಗ್ಗೆ ಸರ್ಕಾರದಿಂದ ತಕ್ಕೊಂಡ ಕ್ರಮವೇನು ?

ಈ) ಈ ಯೋಜನೆಯನ್ನು ಎಷ್ಟು ವರ್ಷದೊಳಗಾಗಿ ಪೂರ್ಣಗೊಳಿಸಲಾಗುವುದು ?

ಉ) ಅಡಿಗಲ್ಲು ಸಮಾರಂಭಕ್ಕೆ ನಿಗದಿ ಪಡಿಸಿದ ತಾರೀಖು ಯಾವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

ಅ) ಈ ನೀರು ಸರಬರಾಜು ಯೋಜನೆಯನ್ನು ದ್ವಿಪಕ್ಷೀಯ ಸಹಾಯದಿಂದ ಕೈಗೊಳ್ಳಬೇಕೆಂದು ಸರ್ಕಾರವು ತೀರ್ಮಾನಿಸಿದೆ. ಆದರೆ ಆಡಳಿತಾತ್ಮಕ ಮಂಜೂರಾತಿಯು ಇನ್ನೂ ಕೊಟ್ಟಿಲ್ಲ.

ಆ) ಈ ಯೋಜನೆಯ ನಕ್ಷೆ ಮತ್ತು ಅಂದಾಜು ವೆಚ್ಚದ ಪಟ್ಟಿಯನ್ನು ತಯಾರಿಸಲಾಗಿದೆ. ಅದರ ಪ್ರಕಾರ 81 ನೇ ಸಾಲಿನ ದರಗಳನ್ನು ಅನುಸರಿಸಿ ಯೋಜನೆಗೆ 380 ಲಕ್ಷ ರೂಪಾಯಿ ತಗಲುತ್ತದೆ.

ಇ) ಈ ಯೋಜನೆಗೆ ದ್ವಿಪಕ್ಷೀಯ ಸಹಾಯವನ್ನು ಪಡೆಯಲು ಕೇಂದ್ರ ಸರ್ಕಾರವನ್ನು ಕೋರಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಆಡಳಿತಾತ್ಮಕ ಮಂಜೂರಾತಿಯಾದ ದೊರೆತ ನಂತರ ಈ ಯೋಜನೆಯನ್ನು ನಾಲ್ಕು ವರ್ಷಗಳಲ್ಲಿ ಪೂರ್ಣಗೊಳಿಸಬಹುದು.

ಉ) ನಿಗದಿಯಾಗಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಅಧ್ಯಕ್ಷರೆ, ಈ ಯೋಜನೆ ಬಗ್ಗೆ ತೀರ್ಮಾನ ತೆಗೆದು ಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹೀಗಿರುವಾಗ ಆಡಳಿತಾತ್ಮಕ ಮಂಜೂರಾತಿ ಕೊಡುವುದಕ್ಕೆ ಏಕೆ ತಡವಾಗುತ್ತಿದೆ? ಕೇಂದ್ರ ಸರ್ಕಾರದಿಂದ ಸಹಾಯ ಪಡೆದು ನಾಲ್ಕೈದು ವರ್ಷಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಬಹುದೆಂದು ಉತ್ತರದಲ್ಲಿ ಹೇಳಿದ್ದಾರೆ. ನಾನು ಕೇಳುವುದೇನೆಂದರೆ, ರಾಜ್ಯ ಸರ್ಕಾರದಿಂದ ಹಲವಾರು ಯೋಜನೆಗಳನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. ರಾಜ್ಯ ಸರ್ಕಾರ ದಿಂದಲೇ ಇದಕ್ಕೆ ಪೂರ್ಣ ಹಣ ಹಾಕಿ ಏಕೆ ಮುಗಿಸಬಾರದು ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಹಣದ ಅಭಾವದಿಂದ ಹಾಗೂ ಇದರ ಜೊತೆಗೆ ಇನ್ನೂ ೪-೫ ಯೋಜನೆಗಳು ಸೇರಿರುವುದರಿಂದ ಪರರಾಷ್ಟ್ರಗಳ ಸಹಾಯದಿಂದ ಈ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಈಗ ಅದಕ್ಕೆ ಆಡಳಿತಾತ್ಮಕ ಮಂಜೂ ರಾತಿ ದೊರೆತು, ಯೋಜನಾ ಇಲಾಖೆ ಹಾಗೂ ಹಣಕಾಸಿನ ಇಲಾಖೆಗೆ ಒಪ್ಪಿಗೆಗಾಗಿ ಕಳುಹಿಸಲಾಗಿದೆ. ಆದಷ್ಟು ಬೇಗ ತೀರ್ಮಾನ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಸರ್ಕಾರ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದರೆ ಯೋಜನಾ ಇಲಾಖೆ ಹಾಗೂ ಹಣಕಾಸಿನ ಇಲಾಖೆಗೆ ಏಕೆ ಕಳುಹಿಸಬೇಕು ? ಮಂಜೂರಾತಿ ದೊರೆತಿದೆಯೋ ಅಥವಾ ಇಲ್ಲವೋ ಎಂಬುದು ಸರಿಯಾಗಿ ಕಾಣುವುದಿಲ್ಲ. ಇದಕ್ಕೆ ಈಗಾಗಲೇ ಅಂದಾಜು ವೆಚ್ಚ ಮಾಡಿದ್ದಾರೆ. ಆಡಳಿತಾತ್ಮಕ ಮಂಜೂರಾತಿ ಕೊಟ್ಟಿಲ್ಲ ಎಂದು ಹೇಳಿದರೆ ಯಾವ ರೀತಿ ನಿರ್ಣಯ ತೆಗೆದುಕೊಳ್ಳುತ್ತೀರಿ ? ಇದು ಮಹತ್ವವಾದ ಪ್ರಶ್ನೆಯಾದ್ದರಿಂದ ನೇರವಾದ ಪ್ರಶ್ನೆ ಕೇಳುತ್ತೇನೆ. ಸರ್ಕಾರದ ಹಣವನ್ನು ಇದರಲ್ಲಿ ತೊಡಗಿಸಿ ಯೋಜನೆಯನ್ನು ಏಕೆ ಮಾಡಬಾರದು ? ಹೋದವರ್ಷವೇ ಇದಕ್ಕೆ ಮಂಜೂರಾತಿ ಸಿಕ್ಕಿದೆಯೆಂದು ತಿಳಿದಿದೆ. ಸಂಕೇಶ್ವರ ಭಾಗದಿಂದ ಕೋಟ್ಯಾಂತರ ರೂಪಾಯಿಗಳ ಟ್ಯಾಕ್ಸನ್ನು ಸರ್ಕಾರಕ್ಕೆ ಕಟ್ಟುತ್ತಿದ್ದೇವೆ. ಸರ್ಕಾರದಿಂದ ಈ ಯೋಜನೆಯನ್ನು ಏಕೆ ಮಾಡಬಾರದು ?

ಶ್ರೀ ಎಂ. ಚಂದ್ರಶೇಖರ್.—ನಾನು ಈಗಾಗಲೇ ಹೇಳಿದ ಹಾಗೆ ನಿಪ್ಪಾಣಿ ಊರಿನ ಜೊತೆಗೆ ಇನ್ನೂ ೪-೫ ನಗರ ಪ್ರದೇಶಗಳು ಸೇರಿವೆ. ಎಲ್ಲದರ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈಗ ಆಡಳಿತಾತ್ಮಕ ಮಂಜೂರಾತಿ ದೊರೆತು ಇದನ್ನು ಬಿಲಾಟರಲ್ ಯೋಜನೆಯಿಂದ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ. ಅದು ಈಗ ಯೋಜನಾ ಮತ್ತು ಹಣಕಾಸಿನ ಇಲಾಖೆಗೆ ಮಂಜೂರಾತಿಗೆ ಹೋಗಿದೆ. ಇದನ್ನು ಕೇಂದ್ರ ಸರ್ಕಾರದ ಸಹಾಯದಿಂದ ಬಿಲಾಟರಲ್ ಸಹಾಯದಿಂದ ಬೇಗ ತೆಗೆದು ಕೊಳ್ಳುವುದಕ್ಕೆ ಅವಕಾಶ ಇದೆ. ನಿಧಾನ ಈ ಸರ್ಕಾರ ಬಂದಮೇಲೆ ಆಗಿದ್ದಲ್ಲ. ೨೧-೯-೧೯೮೧ ರಂದು ಬೆಳಗಾಂನಲ್ಲಿ ತೆಗೆದುಕೊಂಡಂತಹ ತೀರ್ಮಾನ ಇದು. ಅದು ೯-೮-೧೯೮೨ ರಂದು ಇಲ್ಲಿಗೆ ಕಳುಹಿಸಿ ದ್ದಾರೆ. ಒಂದು ವರ್ಷ ಅಲ್ಲೇ ಕಳೆದು ನಂತರ ಕಳುಹಿಸಿದ್ದಾರೆ. ಅವರು ಕಳುಹಿಸಿದ ಮೇಲೆ ಈಗ ಅದು ಯೋಜನಾ ಮತ್ತು ಹಣಕಾಸಿನ ಇಲಾಖೆಗೆ ಹೋಗಿದೆ. ಅಲ್ಲಿಂದ ಬಂದಮೇಲೆ ಆದಷ್ಟು ಬೇಗ ಬಿಲಾಟರಲ್ ಸಹಾಯದಿಂದ ಗ್ಯಾರಂಟಿಯಾಗಿ ಈ ಕೆಲಸ ಬೇಗ ಆಗುತ್ತದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಸರ್ಕಾರದ ಹಣವನ್ನು ಇದರಲ್ಲಿ ತೊಡಗಿಸಿ ಯೋಜನೆಯನ್ನು ಪೂರೈಸಿ ನಂತರ ಕೇಂದ್ರ ಸರ್ಕಾರದ ಪರರಾಷ್ಟ್ರಗಳ ಸಹಾಯದಿಂದ ಬಂದಂತಹ ಹಣವನ್ನು ರೀಇಂಬರ್ಸ್‌ಮೆಂಟ್ ಮಾಡಬಹುದಲ್ಲ.

(ಉತ್ತರ ಇಲ್ಲ)

ಹರಪನಹಳ್ಳಿಯಲ್ಲಿ ಸರ್ಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ ಕಟ್ಟಿಸುವ ಬಗ್ಗೆ

೫೪. ಶ್ರೀ ಬಿ.ಎಚ್. ಪೆಂಕಾನಾಯ್ಕ (ಹರಪನಹಳ್ಳಿ) ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹರಪನಹಳ್ಳಿ ಸರಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ ಕಟ್ಟಡವನ್ನು ಪ್ರಾರಂಭಿಸುವುದಕ್ಕೆ ಹರಪನಹಳ್ಳಿ ನಗರದ ಪುರಸಭೆಯವರು ಕಟ್ಟಡ ಕಟ್ಟಲು ಜಮೀನು ಕೊಟ್ಟಿರುತ್ತಾರೆಯೇ ?

(ಆ) ಹಾಗಿದ್ದಲ್ಲಿ ತ್ವರಿತವಾಗಿ ಕಟ್ಟಡ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ವಿದ್ಯಾ ಮಂತ್ರಿಗಳು).—

(ಅ) ಈ ವಿಷಯ ಸರ್ಕಾರಕ್ಕೆ ತಿಳಿದಿಲ್ಲ.

(ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸ್ವಾಮಿ, ಒಂದು ಎಕರೆ ೩೭ ಗುಂಟೆ ಜಮೀನನ್ನು ಪುರಸಭೆಯವರು ಈ ಕಟ್ಟಡವನ್ನು ಕಟ್ಟುವುದಕ್ಕೆ ಕೊಟ್ಟಿದ್ದಾರೆಂದು ಈಗತಾನೇ ನಮ್ಮ ಆಯುಕ್ತರವರ ಕಛೇರಿಯಿಂದ ಬಂದಂತಹ ವರದಿ ತಿಳಿಸುತ್ತದೆ. ವರಡನೆಯದಾಗಿ, ಚಾಗ ಕೊಟ್ಟಿದ್ದರೂ ಕೂಡ ಈ ಕಟ್ಟಡ ಕಟ್ಟುವುದಕ್ಕೂ ಸ್ಕೂಲಿಗೆ ಬೇಕಾಗಿರತಕ್ಕಂತಹ ಅಂದಾಜಾಗಲೀ, ಹಾಗೂ ಮೆಚ್ಚಣವಾಗಲೀ ಸರ್ಕಾರಕ್ಕೆ ಬಂದಿರುವುದಿಲ್ಲ.

ಶ್ರೀ ಬಿ.ಎಚ್. ಪೆಂಕಾನಾಯಕ್.—ಆ ಬಗ್ಗೆ ಅಂದಾಜು ಮೆಚ್ಚಣವನ್ನು ಕಳುಹಿಸಿಕೊಡುತ್ತೇವೆ. ದಯಮಾಡಿ ಕಟ್ಟಡವನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇಂತಹದ್ದೇ ಮೂರು ಕಟ್ಟಡಗಳು ಆ ಭಾಗದಲ್ಲಿ ಆಗಬೇಕಾಗಿರುವುದರಿಂದ, ಅವುಗಳ ಪೈಕಿ ಇದೂ ಕೂಡ ಅದಕ್ಕೆ ಹೊಂದಿಕೊಂಡಿರುವುದರಿಂದ ಪರಿಶೀಲನೆ ಮಾಡುತ್ತೇನೆ.

ಹೊಸನಗರ ಕ್ಷೇತ್ರಕ್ಕೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವ ಬಗ್ಗೆ

೫೫. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹೊಸನಗರ ಕ್ಷೇತ್ರಕ್ಕೆ ಈವರೆಗೆ ಎಷ್ಟು ಕುಡಿಯುವ ನೀರಿನ ಬಾವಿಗಳನ್ನು ಕೊಡಲಾಗಿದೆ.

(ಆ) ಹಾಗಿದ್ದರೆ ಅವುಗಳೆಲ್ಲವೂ ಕಾರ್ಯಗತವಾಗಿದೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

(ಅ) ಹೊಸನಗರ ಕ್ಷೇತ್ರಕ್ಕೆ ಈವರೆಗೆ ಒಟ್ಟು ೩೦೬ ಬಾವಿಗಳನ್ನು ಒದಗಿಸಲಾಗಿದೆ.

(ಆ) ಮೇಲೆ ನಮೂದಿಸಿರುವ ಬಾವಿಗಳ ಪೈಕಿ ೨೫೭ ಬಾವಿಗಳ ಕೆಲಸ ಪೂರ್ಣಗೊಂಡಿದೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಹೊಸನಗರ ಪಟ್ಟಣದಲ್ಲೂ ಕೂಡ ಯಾವ ಬಾವಿಗಳೂ ಕೆಲಸ ಮಾಡುತ್ತಿಲ್ಲ. ಅವುಗಳ ಜೊತೆಯಲ್ಲಿ ಈ ಬಾವಿಗಳನ್ನು ತೆಗೆದಿದ್ದರೂ ಕೂಡ ಅನೇಕ ದಿವಸಗಳಿಂದ ಬಾವಿಯಲ್ಲಿ ನೀರಿನ ಮಟ್ಟ ಬಹಳ ಕೆಳಗಡೆಗೆ ಹೋಗಿದೆ. ಒಂದು ಬಾವಿಯಲ್ಲಿ ನೀರೇ ಬರುವುದಿಲ್ಲ, ನೀರಿನ ಪರಿಸ್ಥಿತಿ ಬಹಳ ಬಿಕ್ಕಟ್ಟಾಗಿದೆ. ಹೊಸನಗರ ಪಟ್ಟಣದಲ್ಲಿ ಮೂರು ದಿವಸಗಳಿಂದಲೂ ನೀರು ಇಲ್ಲ, ಎಂಬುದಾಗಿ ನನಗೆ ಟೆಲಿಗ್ರಾಂ ಬಂದಿದೆ. ಇವತ್ತು ಬೆಳಗ್ಗೆ ಫೋನ್ ಕೂಡ ಬಂದಿದೆ. ಮತ್ತು ಮೂರು ದಿವಸಗಳಿಂದ ವಿದ್ಯುಚ್ಛಕ್ತಿ ಕೂಡ ಇಲ್ಲ ಎಂಬುದಾಗಿಯೂ ನನಗೆ ವರ್ತಮಾನ ಬಂದಿದೆ. ಕುಡಿಯುವ ನೀರಿನ ಸಮಸ್ಯೆ ಬಹಳ ಭೀಕರವಾದ ಪರಿಸ್ಥಿತಿಗೆ ಬಂದಿದೆ ಎಂಬುದಾಗಿ ತಿಳಿಸಿದ್ದಾರೆ. ಇದನ್ನು ಕೂಡಲೇ ಸರಿಪಡಿಸುತ್ತೀರಾ ?